

## ದೈವಿಕ ಭಾವನೆಯ ‘ಪಾಲೆಮಿಯಾ’

ಬಲಭುಜದಲ್ಲಿ ಇಳಿಬಿದ್ದಿರುವ ಜೋಡಿಕಾಲುಗಳನ್ನು ಹೊಂದಿರುವ ಈ ಹಸುಗಳು ಜನಮಾನಸದಲ್ಲಿ ದೈವಿಕ ಭಾವನೆಯನ್ನು ಹೊಂದಿವೆ. ವಾಸ್ತವವಾಗಿ ಇದು ‘ಪಾಲೆಮಿಯಾ’ ಎಂದು ಕರೆಯಲಾಗುವ ಹೆಚ್ಚುವರಿ ಅಂಗಗಳನ್ನು ಹೊಂದುವ ಕಾಯಿಲೆಯಾಗಿದೆ. ಯುಗ್ಮ ಹಂತದಲ್ಲಿ ಕ್ರೋಮೋಸೋಮ್‌ಗಳ ಅವ್ಯವಸ್ಥೆಯ ಪರಿಣಾಮವಾಗಿ ಹೆಚ್ಚುವರಿ ಅಂಗಗಳು ರೂಪುಗೊಂಡಿರುತ್ತವೆ. ಪ್ರಪಂಚದಾದ್ಯಂತ ಜನಿಸುವ ಕರುಗಳ ಪೈಕಿ ಕೆಲವು ಈ ಕಾಯಿಲೆಗೆ ತುತ್ತಾಗುತ್ತವೆ. ಕೆಲವು ಕರುಗಳು ಹುಟ್ಟಿದ ತಕ್ಷಣವೇ ಸಾಯುತ್ತವೆ. ಇನ್ನೂ ಕೆಲವು ಬೆಳೆದು ಇತರೆ ಸಾಮಾನ್ಯ ಹಸುಗಳಂತೆಯೇ ಬದುಕುತ್ತವೆ. ಹೆಚ್ಚುವರಿ ಕಾಲುಗಳು ಸಾಮಾನ್ಯ ಅಂಗಾಂಗಗಳಂತೆ ದಷ್ಟಪುಷ್ಟವಾಗಿ ಬೆಳೆಯುವುದಿಲ್ಲ. ‘ಇಂತಹ ವಿಶಿಷ್ಟ ರೂಪದಿಂದಾಗಿ ಜನರು ಇವುಗಳನ್ನು ಕಡೆಗಣಿಸದಿರಲಿ. ಅವುಗಳಿಗೂ ಬದುಕುವ ಅವಕಾಶವಾಗಲಿ’ ಎಂಬ ಉದ್ದೇಶದಿಂದ ಪೂರ್ವಜರು ದೇವರ ಪ್ರಸಾದವೆಂದು ಪೂಜಿಸುತ್ತಾ ಬಂದಿರಬಹುದು. ಪ್ರತಿ ಜೀವಿಯೂ ಗೌರವಯುತವಾಗಿ ಬದುಕಲು ಅವಕಾಶ ಕಲ್ಪಿಸುವುದು ನಮ್ಮೆಲ್ಲರ ಕರ್ತವ್ಯ.

**–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ**







## ಭೂತಕ್ಕೆ ಸಾತ್ವಿಕ ಪೂಜೆ!

ಉಡುಪಿ ಜಿಲ್ಲೆಯ ಮನೆಯೊಂದರಲ್ಲಿ ಸುಮಾರು ಐದು ತಲೆಮಾರುಗಳಿಂದ ಪಂಜುರ್ಲಿ, ಬೈಕಾಡ್ತಿ ಎಂಬ ಭೂತ ದಂಪತಿಗಳಿಗೂ ಹಾಗೂ ಕೀಳು ಎಂಬ ಸೇವಕ ಭೂತಕ್ಕೂ ಪೂಜೆಯನ್ನು ಸಲ್ಲಿಸಲಾಗುತ್ತಿದೆ. ಅಕ್ಕಪಕ್ಕ, ಚೌಕಾಕಾರದ ಎರಡು ಶಿಲೆಯ ತುಂಡು, ಎದುರಿನ ಒಂದು ಶಿಲೆಯ ತುಂಡಿನಲ್ಲಿ ಈ ಮೂರೂ ಭೂತಗಳ ಶಕ್ತಿಯನ್ನು ಆವಾಹಿಸಿಕೊಳ್ಳಲಾಗಿದೆ ಎಂದು ಇಲ್ಲಿ ನಂಬಲಾಗಿದೆ.

ಪ್ರತಿವರ್ಷ ವೈಶಾಖ ಮಾಸದ ಮೇ ತಿಂಗಳ ಪೈಕಿ ಒಂದು ದಿನದ ಮುಸ್ಸಂಜೆಯಲ್ಲಿ ಈ ಭೂತಗಳಿಗೆ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ. ಈ ಭೂತಾರಾಧನೆಯಲ್ಲಿ ಕೆಂಪು ಕೇಪಳಾದಿ ಹೂಗಳ ಅಲಂಕಾರದೊಂದಿಗೆ ಹಣತೆ, ದೊಂದಿ ದೀಪ, ಬಿಳಿ ಬಟ್ಟೆಯ ಕಿರುಪತಾಕೆ, ಕುಚ್ಚಲಕ್ಕಿಯ ಅನ್ನ(ಚರು) ಉದ್ದಿನ ತಿಂಡಿಯಾಗಿ ದೋಸೆಯ ಕಡುಬು, ಅಷ್ಟ ದ್ರವ್ಯ ಪಂಚಕಜ್ಜಾಯ, ಎಳನೀರು, ತೆಂಗಿನ ಕಾಯಿ, ಬಾಳೆ ಹಣ್ಣುಗಳನ್ನು ಸಮರ್ಪಿಸುತ್ತಾರೆ. ಚರುವಿಗೆ ಸುರಿಯುವ ಕುಂಕುಮ ನೀರು ರಕ್ತತರ್ಪಣದ ಪ್ರತೀಕವಾದರೆ ಉದ್ದಿನ ತಿಂಡಿಯು ಪ್ರಾಣಿ ಬಲಿಯ ಸಂಕೇತ. ದಿವಂಗತ ಕಡೆಕೊಪ್ಪಲ ಗೋಪಾಲಕೃಷ್ಣ ಭಟ್ಟರ ಮಕ್ಕಳು, ಮನೆತನದವರು ಈ ಸಾತ್ವಿಕ ಭೂತಾರಾಧನೆಯನ್ನು ಪ್ರತಿವರ್ಷ ನೆರವೇರಿಸಿಕೊಂಡು ಬರುತ್ತಿದ್ದಾರೆ.

**–ಸುಶೀಲಾ ಆರ್. ರಾವ್, ಉಡುಪಿ**


## ನೀವೂ ಬರೆಯಿರಿ

‘ಸುಧಾ’ ವಾರಪತ್ರಿಕೆಯಲ್ಲಿ ಪ್ರಕಟವಾಗುವ ‘ನಿಮ್ಮ ಪುಟ’ ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly